# 19-03-2025

# KAAJAANA THEATER TROUPE INAUGURATION

ವಿದ್ಯಾವರ್ಧಕ ಸಂಘ (ರಿ), ಮೈಸೂರು

## ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು

ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು – 570 001

## "ಕಾಜಾಣ ನಾಟಕ ತಂಡ" – ಉದ್ಘಾಟನಾ ಕಾರ್ಯಕ್ರಮ



ಉದ್ಘಾಟಕರು : ಶ್ರೀ. ಜನಾರ್ಧನ್ (ಜನ್ನಿ)
ರಂಗಾಯಣದ ಮಾಜಿ ನಿರ್ದೇಶಕರು
ಹಾಗೂ ಗಾಯಕರು, ಮೈಸೂರು.

ಅಧ್ಯಕ್ಷತೆ : ಡಾ. ಎಸ್ ಮರೀಗೌಡ
ಪ್ರಾಂಶುಪಾಲರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಮೈಸೂರು.



| | |
|---|---|
| ದಿನಾಂಕ: 19.03.2025ನೇ ಬುಧವಾರ | ಸಮಯ: ಬೆಳಗ್ಗೆ 11.30 ಗಂಟೆಗೆ |
| ಸ್ಥಳ : ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ<br>ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು. | |



ವಿದ್ಯಾವರ್ಧಕ ಸಂಘ (ರಿ), ಮೈಸೂರು

## ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು

ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು – 570 001

# "ಕಾಜಾಣ" ನಾಟಕ ತಂಡದ ಉದ್ಘಾಟನಾ ಕಾರ್ಯಕ್ರಮ

ಉದ್ಘಾಟಕರು : ಶ್ರೀ. ಜನಾರ್ಧನ್ (ಜನ್ನಿ)
ರಂಗಾಯಣದ ಮಾಜಿ ನಿರ್ದೇಶಕರು
ಹಾಗೂ ಗಾಯಕರು, ಮೈಸೂರು.

ಅಧ್ಯಕ್ಷತೆ : ಡಾ. ಎಸ್ ಮರೀಗೌಡ
ಪ್ರಾಂಶುಪಾಲರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಮೈಸೂರು.

ಉಪಸ್ಥಿತಿ : ಡಾ. ಪಿ ಕೆ ಗೋವರ್ಧನ್
ಅಧ್ಯಾಪಕ ಸಲಹೆಗಾರರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಮೈಸೂರು

ಸಂಚಾಲಕರು : ಶ್ರೀ ಮಂಜು ಜೆ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಮೈಸೂರು.

ದಿನಾಂಕ: 19.03.2025ನೇ ಬುಧವಾರ                ಸಮಯ: ಬೆಳಿಗ್ಗೆ 11.30 ಗಂಟೆಗೆ

**ಸ್ಥಳ : ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ**
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.

## ಎಲ್ಲರಿಗೂ ಆತ್ಮೀಯ ಸ್ವಾಗತ

ಅಧ್ಯಾಪಕರು, ಅಧ್ಯಾಪಕೇತರರು ಮತ್ತು ವಿದ್ಯಾರ್ಥಿಗಳು

## ಬಸವಣ್ಣನನ್ನು ನೆನೆಯದಿದ್ದರೇ ನಮಗೇ ಸಾಂಸ್ಕೃತಿಕ ಬಡತನುಂಟಾಗುತ್ತದೆ

- ಜನಾರ್ಧನ್ (ಜನ್ನೀ)

ಭವ್ಯವಾದ ಭಾರತದಲ್ಲಿ ನಮಗೆ ನಾವೇ ಸಂವಿಧಾನವನ್ನು ಅರ್ಪಿಸಿಕೊಂಡಿದ್ದೇವೆ. ಇಂತಹ ಸಂವಿಧಾನದ ಒಳಗೆ ಬದುಕುತ್ತಿರುವ ನಾವು ಸಮಾಜದ ಜೀವಿಗಳು. ಈ ಬದುಕಿಗೆ ಕಲೆ ಅತ್ಯಗತ್ಯ. ಮನುಷ್ಯ ಕಲೆಯನ್ನು ಕಲಿಯದಿದ್ದರೇ ಪ್ರಕೃತಿ ವಿಕೃತಿಯಾಗುತ್ತದೆ, ಲಕ್ಷಣ ವಿಲಕ್ಷಣವಾಗುತ್ತದೆ. ಕಲೆಗೆ ಈ ಪ್ರಕೃತಿಯನ್ನು ಸುಂದರಗೊಳಿಸುವ ಗುಣವಿದೆ. ನಾವೆಲ್ಲರೂ ಪ್ರಕೃತಿಯ ಅಂಶಗಳು ನಾವು ನಮ್ಮನ್ನು ದೈವಾಂಶ ಸಂಭೂತರೆಂದುಕೊಂಡು ತಾಯಿಯ ಗರ್ಭವನ್ನು ಇಂದು ಮರೆಯುತ್ತಿದ್ದೇವೆ ಎಂದು ಮೈಸೂರಿನ ರಂಗಾಯಣದ ಮಾಜಿ ನಿರ್ದೇಶಕರು ಹಾಗೂ ಹಾಡುಗಾರರಾದ ಶ್ರೀ.ಹೆಚ್.ಜನಾರ್ಧನ್ (ಜನ್ನಿ) ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಆಯೋಜಿಸಿದ್ದ ಕಾಲೇಜಿನ "ಕಾಜಾಣ ನಾಟಕ ತಂಡ"ದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡುತ್ತಿದ್ದ ಅವರು ಒಂದು ಕಾಲೇಜಿನಲ್ಲಿ ಈ ರೀತಿಯ ಒಂದು ನಾಟಕ ತಂಡ ಉದ್ಘಾಟನೆಯಾಗುತ್ತಿರುವುದು ಬಹಳ ಸಂತಸದ ವಿಷಯ. ವಿದ್ಯಾವರ್ಧಕ ಕಾಲೇಜು ಈ ವಿಚಾರದಲ್ಲಿ ಮೈಸೂರಿಗೆ ಮಾದರಿ ಕಾಲೇಜಾಗಿದೆ. ರಂಗ ದಿಗ್ಗಜರೆನಿಸಿಕೊಂಡ ಬಿ.ವಿ.ಕಾರಂತರು ರಂಗಭೂಮಿಯನ್ನು ವಿಶ್ವಮಟ್ಟಕ್ಕೆ ತೆಗೆದುಕೊಂಡು ಹೋದರು. ನಾಟಕ ಎಂದರೆ ಅದು ಸಂಭ್ರಮ. ನಾಟಕ ಮನುಷ್ಯನಿಗೆ ಶಾಂತಿ, ಸಮಾಧಾನ, ಸಹಬಾಳ್ವೆ, ಸಮಾನತೆ ಅನುಸಂಧಾನವನ್ನು ಬಿತ್ತುತ್ತದೆ. ನಾಟಕ ವಾಸ್ತವವಾಗಿರುವುದನ್ನು ಹಾಗೆಯೇ ತೋರಿಸುತ್ತದೆ. ದೂರದರ್ಶನದಂತೆ ಕಿರಿದಾಗಿಸದೇ ಸಿನಿಮಾದಂತೆ ಹಿರಿದಾಗಿಸದೇ ಸಹಜತೆಯನ್ನು ಉಳಿಸಿಕೊಂಡು ಬರುತ್ತಿದೆ. ನಾಟಕದ ಕಲಿಕೆಯಿಂದಾಗಿ ವ್ಯಕ್ತಿತ್ವ ನಿರ್ಮಾಣವಾಗುತ್ತದೆ, ಅಹಂ ತನವನ್ನು ನಿರಾಕರಿಸುತ್ತದೆ. ಮಾನವೀಯ ಮೌಲ್ಯಗಳಿಗೆ ಒಳಗಾಗುವಂತೆ ಮಾಡುತ್ತದೆ ಎಂದು ತಿಳಿಸುತ್ತಾ ಬಿದಿರು ಹಾಡನ್ನು ಹಾಡಿಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು ಹಾಗೂ ಕಾಲೇಜಿನ ಈ ನಡೆಯನ್ನು ಶ್ಲಾಘಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರು ಮಾತನಾಡುತ್ತಾ ನಮ್ಮ ಕಾಲೇಜಿನಲ್ಲಿ ಈ ಹಿಂದೆಯೇ ಕಾಜಾಣ ತಂಡ ಚಾಲನೆಯಲ್ಲಿ ಇದ್ದಿತ್ತು. ಕಾರಾಣಾಂತರಗಳಿಂದ ಅದರ ಕಾರ್ಯಚಟುವಟಿಕೆಗಳು ನಡೆಯುತ್ತಿರಲಿಲ್ಲ. ಇಂದು ಮತ್ತೊಮ್ಮೆ ಅದಕ್ಕೆ ಚಾಲನೆಯನ್ನು ಜನಾರ್ಧನ್‌ರವರ ಮೂಲಕ ಉದ್ಘಾಟಿಸಲಾಗಿದೆ. ಮುಂದೆ ಈ ತಂಡ ಉತ್ತಮ ನಾಟಕಗಳನ್ನು, ನೃತ್ಯಗಳನ್ನು ವಿದ್ಯಾರ್ಥಿಗಳಿಂದ ಹೊರಹೊಮ್ಮಿಸುತ್ತದೆ ಎಂಬ ನಂಬಿಕೆ ನನಗಿದೆ. ಈ ಹಿಂದೆ ರಂಗಾಯಣದಲ್ಲಿ ನಮ್ಮ ಈ ನಾಟಕ ತಂಡ ಭೂಮಿಗೀತ ವೇದಿಕೆಯಲ್ಲಿ ನಾಟಕವನ್ನು ಪ್ರದರ್ಶನ ಮಾಡಿದೆ. ಹಾಗಾಗಿ ಇಂದು ನಮ್ಮ ಕಾಲೇಜಿನಲ್ಲಿ ಈ ತಂಡ ತನ್ನ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಂದುವರೆಸಿಕೊಂಡು ಹೋಗಲಿ ಎಂದು ಶುಭ ಹಾರೈಸಿದರು.

ಕಾಜಾಣ ನಾಟಕ ತಂಡದ ಸಂಚಾಲಕರಾದ ಪ್ರೊ.ಮಂಜು.ಜೆ ಅವರು ಕಾರ್ಯಕ್ರಮದಲ್ಲಿ ರಂಗಗೀತೆಯನ್ನು ಹಾಡಿ ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ರಂಗಗೀತೆಗಳನ್ನು, ಜನಪದ ಗೀತೆಗಳನ್ನು ಹಾಡಿದರು. ಹಾಲಿ ವಿದ್ಯಾರ್ಥಿಗಳು ಮ್ಯಾಕ್‌ಬೆತ್ ನಾಟಕದ ತುಣಕನ್ನು ಪ್ರದರ್ಶಿಸಿದರು. ಕಾಜಾಣ ನಾಟಕದ ತಂಡದ ಸದಸ್ಯರು, ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಭಾಗವಹಿಸಿದ್ದ ಕಾರ್ಯಕ್ರಮವನ್ನು ಇಂಗ್ಲೀಷ್ ವಿಭಾಗದ ಪ್ರೊ.ಪ್ರೀತಿ ನಿರೂಪಿಸಿ, ಅಧ್ಯಾಪಕ ಸಲಹೆಗಾರರಾದ ಡಾ.ಪಿ.ಕೆ.ಗೋವರ್ಧನ್ ವಂದಿಸಿದರು.






CLAPBOX






















CLAPBOX


CLAPBOX


ಶ್ರೀ.ಜನಾರ್ಧನ್(ಜನ್ನಿ)


ಡಾ.ಎಸ್.ಮರೀಗೌಡ
ಶ್ರೀ.ಜನಾರ್ಧನ್(ಜನ್ನಿ)
ಪ್ರೊ.ಮಂಜು.ಜೆ












CLAPBOX


CLAPBOX




CLAPBOX



